ನಿರ್ದೇಶಿಸಲಾಗಿದೆ. ತನಿಖಾ ವರದಿ ಬಂದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ವಿಷಯ:- ಎಸ್.ಎಸ್.ಎಲ್.ಸಿ ಪರೀಕ್ಷೆಯ ಫಲಿತಾಂಶದಲ್ಲಿ ವ್ಯತ್ಯಾಸ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ : 158 (407)

ಶ್ರೀ ಯು.ಆರ್.ಸಭಾಪತಿ:- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಈ ಬಾರಿ ಎಸ್.ಎಸ್.ಎಲ್.ಸಿ ಫಲಿತಾಂಶ ಪ್ರಕಟಣೆಯಲ್ಲಿ ಕೆಲವು ವ್ಯತ್ಯಾಸಗಳು ಆಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಫಲಿತಾಂಶಗಳ ಅಂಕಗಳ ಮರು ಎಣಿಕೆಗೆ ಕೋರಿ ಬಂದಿರುವ ಒಟ್ಟು ಅರ್ಜಿಗಳ ಸಂಖ್ಯೆ ಎಷ್ಟು?

ಇ) ಈ ಬಗ್ಗೆ ಸರಕಾರದವರು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಜಿ.ಗೋವಿಂದೆಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

ಅ) ಇಲ್ಲ.

ಆ) 11874.

ಇ) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ಅಂಕಗಳ ಮರು ಎಣಿಕೆ ಕಾರ್ಯ ನಡೆಸಿ ಅರ್ಜಿದಾರರಿಗೆ ಉತ್ತರಗಳನ್ನು ನೀಡಲಾಗುತ್ತಿದೆ.

ವಿಷಯ:- ಪ್ರಾಥಮಿಕ ಶಾಲ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 159 (402)

ಶ್ರೀ ಡಿ.ವಿ.ಸದಾನಂದ ಗೌಡ (ಪುತ್ತೂರು):- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ವರ್ಷ ಸರ್ಕಾರದವರು ನೀಡಿದ ಆಶ್ವಾಸನೆಯಂತೆ ಪ್ರಾಥಮಿಕ ಶಿಕ್ಷಕರ ಎಲ್ಲಾ ಖಾಲಿ ಹುದ್ದೆಗಳನ್ನು ಭರ್ತಿ ಮಾಡದಿರಲು ಕಾರಣಗಳೇನು;

ಆ) ಪ್ರಸ್ತುತ, ಖಾಲಿ ಇರುವ ಹುದ್ದೆಗಳೆಷ್ಟು? (ಜಿಲ್ಲಾವಾರು ವಿವರಗಳನ್ನು ಒದಗಿಸುವುದು).

ಇ) ಯಾವಾಗ ಈ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಶ್ರೀ ಹೆಚ್.ಜಿ.ಗೋವಿಂದೆಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

ಅ) ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ದಿನಾಂಕ 30-8-95ರ ಅಂತ್ಯಕ್ಕೆ ಖಾಲಿ ಇದ್ದ

ಹುದ್ದೆಗಳಲ್ಲಿ ಶೇ.50ರಷ್ಟನ್ನು ವಿಶೇಷ ನೇಮಕಾತಿ ಮೂಲಕ ಹಾಗೂ ಉಳಿದ ಹುದ್ದೆಗಳನ್ನು ಸಾಮಾನ್ಯ ನೇಮಕಾತಿ ಮೂಲಕ ಎರಡು ಹಂತಗಳಲ್ಲಿ ತುಂಬಲು ನಿರ್ಧಾರವಾಗಿದ್ದಿತು. ಅದರನ್ವಯ ಮೊದಲನೆ ಹಂತದಲ್ಲಿ ವಿಶೇಷ ನೇಮಕಾತಿ ಮಾಡಲಾಗಿದೆ. ಸಾಮಾನ್ಯ ನೇಮಕಾತಿ ನಿಯಮಗಳಿಗೆ ಕೆಲವು ತಿದ್ದುಪಡಿಗಳ ಅವಶ್ಯಕತೆ ಇದ್ದಿತು. ಸದರಿ ತಿದ್ದುಪಡಿಗಳನ್ನು ತರುವಲ್ಲಿ ಸ್ವಲ್ಪ ಕಾಲಾವಕಾಶ ಹಿಡಿಯಿತು. ಹಾಗಾಗಿ ಎರಡನೇ ಹಂತದ ಸಾಮಾನ್ಯ ನೇಮಕಾತಿಗೆ ಸ್ವಲ್ಪ ವಿಳಂಬವಾಗಿದೆ.

ಆ) 18,650 (ದಿನಾಂಕ 30-8-96ರ ಅಂತ್ಯಕ್ಕೆ) ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಇ) ನೇಮಕಾತಿ ನಿಯಮಗಳಿಗೆ ಅವಶ್ಯವಿದ್ದ ತಿದ್ದುಪಡಿಗಳನ್ನು ಈಗ ತರಲಾಗಿದೆ. ನೇಮಕಾತಿ ಪ್ರಕ್ರಿಯೆಯು ಈಗಾಗಲೇ ಪ್ರಾರಂಭವಾಗಿದೆ. ಸೆಪ್ಟೆಂಬರ್ ಮಾಸಾಂತ್ಯಕ್ಕೆ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಂಡಿದೆ.

ಕ್ರ. ಸಂ.	ಜಿಲ್ಲೆಯ ಹೆಸರು	ಸರ್ಕಾರಿ ಪ್ರಾಥಮಿಕ ಶಾಲೆ ಖಾಲಿ ಇರುವ ಸಹ ಶಿಕ್ಷಕರ ಹುದ್ದೆಗಳು 30-8-96ರಲ್ಲಿದ್ದಂತೆ.	1996-97ನೇ ಸಾಲಿಗೆ ಹೆಚ್ಚುವರಿ ಮಂಜೂರಾದ ಹುದ್ದೆಗಳು.	ಒಟ್ಟು
1.	ಬೆಂಗಳೂರು ಉತ್ತರ	14	23	37
2.	ಬೆಂಗಳೂರು ದಕ್ಷಿಣ	92	77	169
3.	ಬೆಂಗಳೂರು ಗ್ರಾಮಾಂತರ	1071	280	1351
4.	ತುಮಕೂರು	632	220	852
5.	ಕೋಲಾರ	623	300	923
6.	ಚಿತ್ರದುರ್ಗ	640	200	840
7.	ಶಿವಮೊಗ್ಗ	494	220	714
8.	ಮೈಸೂರು	776	380	1156
9.	ಮಂಡ್ಯ	790	200	990
10.	ಕೊಡಗು	247	30	277
11.	ಹಾಸನ	645	250	895
12.	ಚಿಕ್ಕಮಗಳೂರು	373	150	523

13.	ದಕ್ಷಿಣ ಕನ್ನಡ	726	250	976
14.	ಬೆಳಗಾಂ	1178	400	1578
15.	ವಿಜಾಪುರ	580	400	980
16.	ಧಾರವಾಡ	1123	400	1523
17.	ಉತ್ತರ ಕನ್ನಡ	731	150	881
18.	ಗುಲ್ಬರ್ಗಾ	733	400	1133
19.	ಬೀದರ್	664	150	814
20.	ರಾಯಚೂರು	902	300	1202
21.	ಬಳ್ಳಾರಿ	616	220	836
		13650	5000	18650

ವಿಷಯ: ರಾಜ್ಯದಲ್ಲಿ ಕುಷ್ಠರೋಗಿಗಳ ಪುನರ್ವಸತಿ ಕಾರ್ಯಕ್ರಮ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 161 (500)

ಎಸ್.ಸುರೇಶ್ ಕುಮಾರ್ (ರಾಜಾಜಿನಗರ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಕುಷ್ಠರೋಗಿಗಳ ಸಂಖ್ಯೆ ಎಷ್ಟು ? (ಜಿಲ್ಲಾವಾರು ವಿವರ ನೀಡುವುದು)

ಆ) ಕುಷ್ಠರೋಗಿಗಳ ಪುನರ್ವಸತಿ ಕೇಂದ್ರಗಳು ರಾಜ್ಯದಲ್ಲಿ ಯಾವ ಸ್ಥಳಗಳಲ್ಲಿವೆ?

ಇ) ಈ ಕೇಂದ್ರಗಳಲ್ಲಿ ಇದುವರೆಗೂ ಕೈಗೊಂಡಿರುವ ಕಾರ್ಯಕ್ರಮಗಳೇನು?

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಕುಷ್ಠರೋಗಿಗಳ ಸಂಖ್ಯೆ
1.	ಬೆಂಗಳೂರು ನಗರ	855
2.	ಬೆಂಗಳೂರು (ಗ್ರಾ)	520
3.	ಚಿತ್ರದುರ್ಗ	660
4.	ಕೋಲಾರ	1108